# ಕರ್ನಾಟಕ ವಿಧಾನ ಪರಿಷತ್ತು

<table>
<tr><td>ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ</td><td>255(405)</td></tr>
<tr><td>ಸದಸ್ಯರ ಹೆಸರು</td><td>ಶ್ರೀ ಕೆ ಅಬ್ದುಲ್ ಜಬ್ಬಾರ್ (ವಿಧಾನಸಭೆಯಿಂದ ಚುನಾಯಿತರಾದವರು)</td></tr>
<tr><td>ವಿಷಯ</td><td>ಹಿರಿಯ ನಾಗರಿಕರ ಪಿಂಚಣಿ ತಡವಾಗುತ್ತಿರುವ ಕುರಿತು</td></tr>
<tr><td>ಉತ್ತರಿಸಬೇಕಾದ ದಿನಾಂಕ</td><td>21-12-2022</td></tr>
<tr><td>ಉತ್ತರಿಸುವ ಸಚಿವರು</td><td>ಕಂದಾಯ ಸಚಿವರು</td></tr>
<tr><th>ಪ್ರಶ್ನೆ</th><th>ಉತ್ತರ</th></tr>
<tr><td>ಅ) ರಾಜ್ಯದಲ್ಲಿ ಹಿರಿಯ ನಾಗರಿಕರಿಗೆ ನೀಡಲಾಗುತ್ತಿರುವ ಮಾಸಿಕ ಪಿಂಚಣಿಯ ಮೊತ್ತವೆಷ್ಟು; ಕಳೆದ 3 ವರ್ಷಗಳಲ್ಲಿ ಇದರ ಪ್ರಯೋಜನ ಪಡೆದವರೆಷ್ಟು (ಜಿಲ್ಲಾವಾರು ಅಂಕಿ-ಅಂಶಗಳ ಮಾಹಿತಿ ನೀಡುವುದು)</td><td>ರಾಜ್ಯದಲ್ಲಿ ಹಿರಿಯ ನಾಗರಿಕರಿಗೆ ನೀಡಲಾಗುತ್ತಿರುವ ಮಾಸಿಕ ಪಿಂಚಣಿಯ ಮೊತ್ತದ ವಿವರ ಕೆಳಗಿನಂತಿದೆ.
<table>
<tr><th>ಕ್ರಸಂ</th><th>ಯೋಜನೆಯ ಹೆಸರು</th><th>ಪಿಂಚಣಿ ಮೊತ್ತ</th></tr>
<tr><td rowspan="3">1</td><td>ಇಂದಿರಾಗಾಂಧಿ ವೃದ್ಧಾಪ್ಯ ವೇತನ</td><td rowspan="2">ರೂ 600/-</td></tr>
<tr><td>ವಯಸ್ಸು 60 ರಿಂದ 64 ವರ್ಷ</td></tr>
<tr><td>65 ವರ್ಷ ಮೇಲ್ಪಟ್ಟು</td><td>ರೂ 1200/-</td></tr>
<tr><td rowspan="2">2</td><td>ಸಂಧ್ಯಾಸುರಕ್ಷಾ ಯೋಜನೆ</td><td rowspan="2">ರೂ 1200/-</td></tr>
<tr><td>65 ವರ್ಷ ಮೇಲ್ಪಟ್ಟು</td></tr>
</table>
ಕಳೆದ 3 ವರ್ಷಗಳಲ್ಲಿ ಇದರ ಪ್ರಯೋಜನ ಪಡೆದ ಫಲಾನುಭವಿಗಳ ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.</td></tr>
<tr><td>ಆ) ಕಳೆದ ಮೂರು ತಿಂಗಳಿನಿಂದ ಹಿರಿಯ ನಾಗರಿಕರಿಗೆ ಮಾಸಿಕ ಪಿಂಚಣಿ ವಿತರಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;</td><td>ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಗಳಡಿ ಅರ್ಹ ಫಲಾನುಭವಿಗಳಿಗೆ ಪ್ರತಿ ತಿಂಗಳು ಪಿಂಚಣಿ ಪಾವತಿಸಲಾಗುತ್ತಿದ್ದು, ನವೆಂಬರ್-2022 ರವರೆಗಿನ ಪಿಂಚಣಿ ಪಾವತಿಗಾಗಿ ಕ್ರಮವಹಿಸಲಾಗಿದೆ. ಸರ್ಕಾರದ ಸುತ್ತೋಲೆ ಸಂಖ್ಯೆ ಡಿಎಸ್‌ಎಸ್‌ಪಿ /ಎಮ್‌ಐಎಸ್‌ಸಿ/56/2022 ದಿನಾಂಕ: 23-08-2022 ರನ್ವಯ ಸಾಮಾಜಿಕ ಭದ್ರತಾ ಯೋಜನೆಗಳಡಿ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳನ್ನು ನೇರ ಹಣ ಸಂದಾಯ ಯೋಜನೆಗೆ ವರ್ಗಾಯಿಸುವಲ್ಲಿ ಆಧಾರ್ ಜೋಡಣೆಗೆ ಬಾಕಿಯಿದ್ದ ಹಾಗೂ ಇಎಂಓ ಮೂಲಕ ಪಿಂಚಣಿ ಪಡೆಯುತ್ತಿರುವ 1.24 ಲಕ್ಷ ಫಲಾನುಭವಿಗಳ ಪಿಂಚಣಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ತಾತ್ಕಾಲಿಕವಾಗಿ ಸ್ಥಗಿತಗೊಂಡ ಪ್ರಕರಣಗಳಲ್ಲಿ ಕಡ್ಡಾಯವಾಗಿ ಆಧಾರ್ ಸಂಖ್ಯೆ ಮತ್ತು ಬ್ಯಾಂಕ್ ಖಾತೆಯ ವಿವರವನ್ನು ಸಲ್ಲಿಸಿದ ನಂತರ ಸಂಬಂಧಪಟ್ಟ ತಹಶೀಲ್ದಾರ್‌ರು ಪಿಂಚಣಿಯನ್ನು ಮರುಚಾಲನೆಗೊಳಿಸಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ. ಮರುಚಾಲನೆಗೊಳಿಸಿದ ನಂತರ ಮೂರು ತಿಂಗಳಿನ ಬಾಕಿ ಪಿಂಚಣಿಯನ್ನು ಸಹ ಪಾವತಿಸಲಾಗುತ್ತದೆ.</td></tr>
</table>

<table>
<tr>
<td>ಇ) ಹಿರಿಯ ನಾಗರಿಕರಿಗೆ ನೀಡಲಾಗುತ್ತಿರುವ ಮಾಸಿಕ ಪಿಂಚಣಿ ಯೋಜನೆಯ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಪಾಲುದಾರಿಕೆ ಮೂಲಕ ವಿತರಿಸಲಾಗುತ್ತಿದೆಯೇ; ಹೌದಾದಲ್ಲಿ ಶೇಕಡವಾರು ಎಷ್ಟು;</td>
<td>ಹೌದು. ಹಿರಿಯ ನಾಗರಿಕರಿಗೆ ನೀಡಲಾಗುತ್ತಿರುವ ಮಾಸಿಕ ಪಿಂಚಣಿ ಯೋಜನೆಯ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಪಾಲುದಾರಿಕೆ ಮೂಲಕ ವಿತರಿಸಲಾಗುತ್ತಿದೆ. ವಿವರ ಕೆಳಗಿನಂತಿದೆ.
<table>
<tr><th>ಯೋಜನೆ ಹೆಸರು</th><th>ವಯಸ್ಸಿನ ಮಿತಿ</th><th>ಕೇಂದ್ರದ ಪಾಲು</th><th>ರಾಜ್ಯದ ಪಾಲು</th><th>ಒಟ್ಟು</th></tr>
<tr><td rowspan="3">ಇಂದಿರಾ ಗಾಂಧಿ ವೃದ್ಧಾಪ್ಯ ವೇತನ</td><td>60-64 ವರ್ಷ</td><td>ರೂ 200/-</td><td>ರೂ 400/-</td><td>ರೂ 600/-</td></tr>
<tr><td>65-79 ವರ್ಷ</td><td>ರೂ 200/-</td><td>ರೂ 1000/-</td><td>ರೂ 1200/-</td></tr>
<tr><td>80 ವರ್ಷ ಮೇಲ್ಪಟ್ಟು</td><td>ರೂ 500/-</td><td>ರೂ 700/-</td><td>ರೂ 1200/-</td></tr>
<tr><td colspan="5">60 ವರ್ಷ ಮೇಲ್ಪಟ್ಟ ಹಿರಿಯರಿಗೆ ಜಾರಿಗೊಳಿಸುತ್ತಿರುವ ವೃದ್ಧಾಪ್ಯ ವೇತನ ಹಾಗೂ ಸಂಧ್ಯಾಸುರಕ್ಷಾ ಯೋಜನೆಯಡಿ ಒಟ್ಟು 4751107 ಫಲಾನುಭವಿಗಳಿದ್ದು, ಈ ಪೈಕಿ 894722 ಫಲಾನುಭವಿಳಿಗೆ ಕೇಂದ್ರ ಸರ್ಕಾರವು ಭಾಗಶಃ ಪಿಂಚಣಿ ಅನುದಾನವನ್ನು ಬಿಡುಗಡೆಗೊಳಿಸುತ್ತಿದೆ.</td></tr>
</table>
</td>
</tr>
<tr>
<td>ಈ) ಕಂದಾಯ ಇಲಾಖೆಯಿಂದ ಹಿರಿಯ ನಾಗರಿಕರಿಗೆ ಒದಗಿಸಲಾಗುವ ಇನ್ನಿತರೆ ಸೌಲಭ್ಯಗಳು ಯಾವುದು?</td>
<td>ಯಾವುದು ಇರುವುದಿಲ್ಲ..</td>
</tr>
</table>

**ಸಂಖ್ಯೆ: DSSP/LCQ/30/2022**

(ಆರ್.ಅಶೋಕ)
**ಕಂದಾಯ ಸಚಿವರು**

| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ ಅಬ್ದುಲ್ ಜಬ್ಬಾರ್ (ವಿಧಾನಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 255 (405) ಕ್ಕೆಅನುಬಂಧ | | | | | | | | |
|---|---|---|---|---|---|---|---|---|
| ಕ್ರ.ಸಂ | ಜಿಲ್ಲೆ | 2019-20 | | 2020-21 | | 2021-22 | | |
| | | ವೃದ್ಧಾಪ್ಯ ವೇತನ | ಸಂಧ್ಯಾ ಸುರಕ್ಷಾ ವೇತನ | ವೃದ್ಧಾಪ್ಯ ವೇತನ | ಸಂಧ್ಯಾ ಸುರಕ್ಷಾ ವೇತನ | ವೃದ್ಧಾಪ್ಯ ವೇತನ | ಸಂಧ್ಯಾ ಸುರಕ್ಷಾ ವೇತನ | ಒಟ್ಟು |
| 1 | ಬಾಗಲಕೋಟೆ | 17827 | 82933 | 17742 | 81850 | 22682 | 92865 | 315899 |
| 2 | ಬಳ್ಳಾರಿ | 63055 | 78023 | 70916 | 88872 | 39247 | 35021 | 375134 |
| 3 | ಬೆಂಗಳೂರು ಗ್ರಾಮಾಂತರ | 33155 | 45576 | 32004 | 41960 | 40138 | 45998 | 238831 |
| 4 | ಬೆಳಗಾವಿ | 67391 | 272135 | 77762 | 300780 | 89214 | 324611 | 1131893 |
| 5 | ಬೆಂಗಳೂರು ನಗರ | 50400 | 113732 | 70073 | 143435 | 90981 | 163395 | 632016 |
| 6 | ಬೀದರ್ | 35281 | 91705 | 40732 | 91124 | 52496 | 102822 | 414160 |
| 7 | ಚಾಮರಾಜನಗರ | 85192 | 40367 | 88829 | 40971 | 94028 | 37022 | 386409 |
| 8 | ಚಿಕ್ಕಬಳ್ಳಾಪುರ | 23581 | 86940 | 28094 | 89601 | 42150 | 90382 | 360748 |
| 9 | ಚಿಕ್ಕಮಗಳೂರು | 24033 | 71404 | 26254 | 72953 | 33554 | 78332 | 306530 |
| 10 | ಚಿತ್ರದುರ್ಗ | 21641 | 115057 | 24550 | 113686 | 30757 | 121910 | 427601 |
| 11 | ಮಂಗಳೂರು | 13164 | 59529 | 17045 | 62063 | 27473 | 61789 | 241063 |
| 12 | ದಾವಣಗೆರೆ | 44408 | 80038 | 47307 | 77896 | 56978 | 84192 | 390819 |
| 13 | ಧಾರವಾಡ | 40880 | 62311 | 44748 | 64200 | 53853 | 68995 | 334987 |
| 14 | ಗದಗ | 33392 | 33209 | 35129 | 31963 | 40306 | 33297 | 207296 |
| 15 | ಹಾಸನ | 99544 | 85706 | 109430 | 95114 | 125206 | 94252 | 609252 |
| 16 | ಹಾವೇರಿ | 10674 | 77337 | 12221 | 82173 | 21875 | 89588 | 293868 |
| 17 | ಕಲ್ಬುರ್ಗಿ | 35600 | 85486 | 38252 | 90301 | 47259 | 106387 | 403285 |
| 18 | ಕೊಡಗು | 6794 | 21147 | 7918 | 21096 | 11418 | 20733 | 89106 |
| 19 | ಕೋಲಾರ | 41148 | 83037 | 48804 | 90198 | 56992 | 93016 | 413195 |
| 20 | ಕೊಪ್ಪಳ | 22181 | 73648 | 23786 | 72347 | 29725 | 76800 | 298487 |
| 21 | ಮಂಡ್ಯ | 95480 | 93668 | 107698 | 100184 | 118811 | 98470 | 614311 |
| 22 | ಮೈಸೂರು | 44097 | 137860 | 44951 | 138179 | 61543 | 155687 | 582317 |
| 23 | ರಾಯಚೂರು | 48818 | 87993 | 53916 | 91257 | 64640 | 97665 | 444289 |
| 24 | ರಾಮನಗರ | 47173 | 87011 | 51098 | 86336 | 60168 | 83972 | 415758 |
| 25 | ಶಿವಮೊಗ್ಗ | 24045 | 64775 | 24761 | 63735 | 31154 | 67011 | 275481 |
| 26 | ತುಮಕೂರು | 41117 | 192939 | 46906 | 194202 | 61965 | 204250 | 741379 |
| 27 | ಉಡುಪಿ | 13118 | 64514 | 16465 | 65501 | 25099 | 64734 | 249431 |
| 28 | ಉತ್ತರಕನ್ನಡ | 23087 | 49456 | 25524 | 49729 | 32680 | 50931 | 231407 |
| 29 | ವಿಜಯಪುರ | 32630 | 104300 | 36642 | 106632 | 34483 | 50329 | 365016 |
| 30 | ವಿಜಯನಗರ | 0 | 0 | 0 | 0 | 46244 | 119999 | 166243 |
| 30 | ಯಾದಗಿರಿ | 17111 | 69083 | 19607 | 70135 | 24137 | 76563 | 276636 |
| | **ಒಟ್ಟು** | **1156017** | **2610919** | **1289164** | **2718473** | **1567256** | **2891018** | **12232847** |